<u>ದಿನಾಂಕಃ **06-06-2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ವಿ ವಕೀಲರಿಂದಃ-</u>

1) ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಪ್ರಮಾಣ ಪತ್ರವನ್ನು ತಿಮ್ಮಪ್ಪ ಹೇಳಿ ಬರೆಯಿಸಿರುತ್ತಾನೆ. ದಿನಾಂಕ 19-12-2021 ರಂದು ಪ್ರತಿವಾದಿಯರು ಕೊಲೆ ಬೆದರಿಕೆ ಹಾಕಿರುತ್ತಾರೆ ಮತ್ತು ನನಗೆ ಬೈದಿರುತ್ತಾರೆ. ಸದರಿ ಸಮಯದಲ್ಲಿ ಮಂಜು ಮತ್ತು ಕುಮಾರ ಅನ್ನುವವರು ಇದ್ದರು. ಸದರಿ ಬೈದಾಗ, ಗಲಾಟೆ ಮಾಡಿದಾಗ ಬೆಳಿಗ್ಗೆ 12 ರಿಂದ 12-30 ಗಂಟೆ ಆಗಿತ್ತು. ನಾವು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇವೆ ಹಾಗಾಗಿ ಪ್ರತಿವಾದಿಗಳು ಬಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಪ್ರತಿವಾದಿಯರು ತಮ್ಮ ಬೆಂಬಲಿಗರೊಂದಿಗೆ ಬಂದು ನನಗೆ ಕೊಲೆ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕ 20-09-2021 ರಂದು ಈ ದಾವೆ ಹಾಕಲು ವ್ಯಾಜ್ಯ ಕಾರಣ ಉಂಟಾಯಿತು. ದಿನಾಂಕ 20-09-2021 ರಂದು ವ್ಯಾಜ್ಯ ಉಂಟಾಗಿದೆ ಎಂದು ಪೊಲೀಸರಿಗೆ ಒಂದು ಸುಳ್ಳು ದೂರನ್ನು ನೀಡಿದ್ದೇನೆ ಅಂದರೆ ಸರಿಯಲ್ಲ. ಈ ದಾವೆ ಹಾಕುವ ಸಲುವಾಗಿ ಸುಳ್ಳು ದೂರನ್ನು ನೀಡಿ, ಸುಳ್ಳು ಹಿಂಬರಹವನ್ನು ಪೊಲೀಸರಿಂದ ಪಡೆದುಕೊಂಡು ಬಂದಿರುತ್ತೇನೆ ಅಂದರೆ ಸರಿಯಲ್ಲ.

2) ದಿನಾಂಕ 20-09-1999 ರಂದು ಮೀಸೆ ತಿಮ್ಮಪ್ಪ ದಾವಾ ಆಸ್ತಿಯ ಸ್ವಾಧೀನತೆಯನ್ನು ನಮಗೆ ಬಿಟ್ಟುಕೊಟ್ಟಿರುತ್ತಾನೆ. ದಿನಾಂಕ 20-09-1999 ರಂದು ಸಹಿ ಮಾಡಿದ್ದಾನೆ ಎಂದು ತೋರಿಸಲು ನಿಪಿ-12 ಸುಳ್ಳು ದಾಖಲೆಯನ್ನು ಸೃಷ್ಟಿ

ಮಾಡಿದ್ದೇನೆ ಅಂದರೆ ಸರಿಯಲ್ಲ. ಸದರಿ ನಿಪಿ-12 ಸುಳ್ಳು ದಾಖಲೆ ಆಧಾರದ ಮೇಲೆ ದಾವಾ ಆಸ್ತಿ ಉಳುಮೆ ಮಾಡಲು ಹೋಗಿದ್ದೆ ಅಂದರೆ ಸರಿಯಲ್ಲ. ಮೀಸೆ ತಿಮ್ಮಪ್ಪ ತನ್ನ ಜೀವಿತ ಕಾಲದಲ್ಲಿ ಈಗ ಪ್ರತಿವಾದಿಗಳು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಾ ಇರುತ್ತಾರೆ ಅಂದರೆ ಸರಿಯಲ್ಲ. ಮೀಸೆ ತಿಮ್ಮಪ್ಪ ಯಾವುದೇ ದಾಖಲೆ ಮಾಡಿಕೊಡದೇ ಇದ್ದರೂ ಸಹ ಬೇರೆಯವರ ಹೆಬ್ಬೆಟ್ಟಿನ ಗುರುತನ್ನು ಹಾಕಿ ಒಂದು ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ನಾನು ಹಾಜರುಪಡಿಸಿರುವ ನಿಪಿ-2 ರಿಂದ ನಿಪಿ-12 ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ.

3) ಪ್ರತಿವಾದಿಗಳ ಮೇಲೆ ಸೃಷ್ಟಿ ಮಾಡಿಕೊಂಡು ಸುಳ್ಳು ದೂರು ನೀಡಿದ್ದೇನೆ ಅಂದರೆ ಸರಿಯಲ್ಲ. ನನ್ನ ಮೇಲೆ ಎಷ್ಟು ಕ್ರಿಮಿನಲ್ ಕೇಸುಗಳು ಇವೆ ಅಂದರೆ ಸಾಕ್ಷಿ ಯಾವುದೇ ಕೇಸು ಇಲ್ಲ ಎಂದು ಹೇಳುತ್ತಾರೆ. ನಿಪಿ-7 ರಿಂದ 9 ದಾಖಲೆಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು

ಈಗಾಗಲೇ ಸಾಕಷ್ಟು ಕಾಲವಕಾಶ ನೀಡಿದ್ದು , ಆದ್ದರಿಂದ ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರವಾದ ಕಾರಣ ಇಲ್ಲದೇ ಇದ್ದುದರಿಂದ ಪಾಟೀ ಸವಾಲು ಮುಕ್ತಾಯ ಎಂದು ತೆಗೆದುಕೊಳ್ಳಲಾಯಿತು.